CC NO. PW CW

30ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ, ಬೆಂಗಳೂರು.
ಬೆಂಗಳೂರು ನಗರ.

ಸಿ.ಸಿ. ನಂಃ1510/2020 ಪ್ರಾಸಾ-2 ಚಾಸಾ-9

| | |
|---|---|
| ಸಾಕ್ಷಿಯ ಹೆಸರು | ಸೋಮಪ್ಪ ಗೋಡಿ |
| ತಂದೆಯ/ಗಂಡನ ಹೆಸರು | ಸಂಗಪ್ಪ |
| ವಯಸ್ಸು | 36 ವರ್ಷ |
| ಉದ್ಯೋಗ | ಪಿ ಎಸ್ ಐ, ಪರಪ್ಪನ ಅಗ್ರಹಾರ ಪೋಲೀಸ್ ಠಾಣೆ |
| ವಿಳಾಸ | ಬೆಂಗಳೂರು. |

ಸಾಕ್ಷಿಯನ್ನು ಈ ದಿವಸ ದಿನಾಂಕಃ31-01-2023 ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.
ಮುಖ್ಯ ವಿಚಾರಣೆಃ ಹಿರಿಯ ಸ.ಸ.ಅ. ರವರಿಂದ.

ನಾನು ದಿಃ25-8-2018 ರಿಂದ ದಿಃ5-4-2021 ರವರೆಗೆ ಜೆ ಪಿ ನಗರ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿಃ21-08-2020 ರಂದು ಮಧ್ಯಾಹ್ನ 01-15 ಗಂಟೆಯಲ್ಲಿ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1 ಇವರು ಕೊಟ್ಟ ದೂರಿನನ್ವಯ, ಠಾಣಾ ಗುನ್ನೆ ನಂಬರ್ 55/2020 ರಲ್ಲಿ ಪ್ರಕರಣ ದಾಖಲಿಸಿಕೊಂಡು ಪ್ರ.ವ.ವ.ನ್ನು ನ್ಯಾಯಾಲಯಕ್ಕೆ ಸಲ್ಲಿಸಿದೆನು. ದೂರನ್ನು ನಿಪಿ-2 ಎಂದು ಹಾಗೂ ಪ್ರ.ವ.ವ. ನ್ನು ನಿಪಿ-3 ಎಂದು ಹಾಗೂ ಅದರಲ್ಲಿರುವ ಸಾಕ್ಷಿಗಳ ರುಜುಗಳನ್ನು ನಿಪಿ-2(ಎ) ಮತ್ತು ನಿಪಿ-3(ಎ) ಎಂದು ಗುರುತಿಸಲಾಯಿತು.

ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿಕೊಟ್ಟು, ಚಾಸಾ-1 ಇವರು ತೋರಿಸಿದ ಸ್ಥಳದಲ್ಲಿ, ಪಂಚರ ಸಮ್ಮುಖದಲ್ಲಿ ಮಹಜರ್ ಮಾಡಿರುತ್ತೇನೆ. ಅದನ್ನು ನಿಪಿ-4 ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-4(ಎ)ಎಂದು ಗುರುತಿಸಲಾಯಿತು. ಮುಂದಿನ ತನಿಖೆಯನ್ನು ಚಾಸಾ- 10 ಇವರಿಗೆ ವಹಿಸಿರುತ್ತೇನೆ.

ಪಾಟಿ ಸವಾಲುಃ ಆರೋಪಿ ಪರ ವಾಗಿ ಯಾರು ಪ್ರತಿನಿಧಿಸದೇ ಇರುವುದರಿಂದ ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿನಯ್ ಕುಮಾರ್{(2015)3 ಎಸ್ ಸಿ ಸಿ 220} ಪ್ರಕರಣದಲ್ಲಿ ನೀಡಿದ ತೀರ್ಪಿನ ಅನ್ವಯ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.
ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

30ನೇ ಅ.ಮು.ಮ.ದಂ. ಬೆಂಗಳೂರು.